16.8.36.
नीतिमाला (कर्नाटक भाषा)
8

ಓಂ

ನಮಃ.

ನೀತಿಮಾಲ.

(Series Nos. 1 and 2 in one.)

ಬೆಂಗಳೂರು ಡಿಸ್ಟ್ರಿಕ್ಟ್ ಹೊಸಕೋಟೆ
ತಾಲ್ಲೂಕ್, ಸಬ್‌ರಿಜಿಸ್ಟ್ರಾರ್.
ಎಸ್. ರಾಮಸ್ವಾಮಯ್ಯಂಗಾರಿಂದ
ರಚಿಸಲ್ಪಟ್ಟ.

ಬೆಂಗಳೂರು
"ನವರತ್ನ" ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.
1910.

ಕ್ರಯ 2 ಆಣೆ.

Those who will at one time purchase one hundred copies will be given ten copies gratis. Similarly five for every fifty and one for every ten.

ನೀತಿಮಾಲಾ.

೧ ಬುದ್ಧಿವಂತನಾದವನು ಎಲ್ಲರನ್ನೂ ಒಂದೇದಾರಿಯಲ್ಲಿ ಬರುವಂತೆಮಾಡುವನು.

೨ ಯಾವಾಗಲೂ ಕಾರ್ಯಕರಿಯಾದಂಥಾ ಕೆಲಸಗಳಲ್ಲಿ ನಾವು ಉದ್ಯುಕ್ತರಾಗಿರಬೇಕು.

೩ ಕಷ್ಟನಿಷ್ಠುರಗಳು ನಮ್ಮ ಕ್ಷೇಮಕ್ಕೇನೇ ಬರುವವು.

೪ ಹೃದಯದಲ್ಲಿ ಭಗವಂತನನ್ನು ಧ್ಯಾನಿಸಿಕೊಂಡು, ಕೈಗಳನ್ನು ಕಾರ್ಯಗಳಲ್ಲಿ ವುಪಯೋಗಿಸತಕ್ಕದ್ದು.

೫ ದಿಕ್ಕುತೋಚದೆಇದ್ದಾಗ ಭಗವಂತನಲ್ಲಿ ಪ್ರಾರ್ಥನೆಯನ್ನು ಮಾಡಿ, ಅವನ ಆಜ್ಞೆಗೆ ಕಿವಿಕೊಟ್ಟು ಕೇಳಿ, ಅದನ್ನು ವುಲ್ಲಂಘಿಸದೆ, ಭಗವತ್ಪ್ರೇರಣೆ ಆದಮೇರೆಗೆ ನಡೆಯಬೇಕು.

೬ ಈವತ್ತಿನದಿನ ವ್ಯರ್ಥಕಾಲಕ್ಷೇಪ ಮಾಡಿದರೆ, ನಾಳೆಯ ವಿರಾಮಕ್ಕೆ ಲೋಪಬರುವದು ಸಿದ್ಧ.

೭ ಕಾಲವನ್ನು ಕಾರ್ಯಗಳಲ್ಲಿ ವಿನಿಯೋಗಿಸುವ ವಿಷಯದಲ್ಲಿ ವಿಶೇಷ ಜಾಗರೂಕತೆ ಇರಬೇಕು.

೮ ಜನಗಳಲ್ಲಿರುವದುರ್ಗುಣಗಳನ್ನು ಬಿಟ್ಟು, ಸುಗುಣಗಳನ್ನೇ ಗ್ರಹಿಸಬೇಕು.

೯ ಎಲ್ಲರನ್ನೂ ವಿಶ್ವಾಸಿಸುವುದನ್ನು ಅಭ್ಯಾಸ ಮಾಡತಕ್ಕದ್ದು.

೧೦ ಇತರರ ತಪ್ಪಿತಗಳನ್ನು ಮರೆಯುತ್ತಲೂ, ಕ್ಷಮಿಸುತ್ತಲೂ, ಇರಬೇಕು.

೧೧ ಬಂದದ್ದೆಲ್ಲಾ ಬರಲಿ, ದೇವರದಯೆ ಒಂದಿರಲಿ, ಎಂಬಂತೆ ಏನುವಿಪತ್ತು ಬಂದರೂ ಸಹಿಸಿಕೊಂಡು, ಸಂತೋಷದಲ್ಲಿಯೆ ಇರುವುದಾಗಿ ಪ್ರತಿಜ್ಞೆಯನ್ನು ಮಾಡಿಕೊಳ್ಳತಕ್ಕದ್ದು.

೧೨ ನಾವು ಒಬ್ಬರಿಗೊಬ್ಬರು ಸಹಕರಿಸುವುದಕ್ಕೆ ಇದ್ದೇವೆಯೇ ಹೊರತು, ಕುಂದಕ ಮಾಡುವುದಕ್ಕೆ ಅಲ್ಲ

೧೩ ಮನಸ್ಸಿನಲ್ಲಿ ಖೇದವೂ, ದುರಾಶೆಯೂ, ಕ್ರೋಧವೂ, ಯಾವದೂ ನೆಲಗೊಳದಂತೆ ಮಾಡಿಕೊಳ್ಳಬೇಕು.

೧೪ ನಾವು ಕಡಿಯುವ ವಿದ್ಯವನ್ನೆಲ್ಲಾ ನಮ್ಮ ನಿತ್ಯಾಚರಣೆಯಲ್ಲಿ ತರಬೇಕು.

೧೫ ಮನುಷ್ಯನು ಅವನು ಹೇಳುವಂತೆಯೂ, ಕೇಳುವಂತೆಯೂ, ಓದುವಂತೆಯೂ, ಇರುವುದಿಲ್ಲ. ಆದರೆ ಅವನು ಯೋಚಿಸುವಂತೆಯೇ ಇರುವನು.

೧೬ ಕಳದು ಹೋದುದಕ್ಕೆ ವ್ಯರ್ಥವಾಗಿ ಚಿಂತಿಸಿಕೊಂಡು ಕೂಡಬಾರದು.

೧೭ ನ್ಯಾಯವಾಗಿ ಕಷ್ಟಪಟ್ಟು ಜೀವಿಸುವದರಲ್ಲಿ ಏನೂ ಅವಮಾನವಿಲ್ಲ.

೧೮ ವ್ಯಸನಬಂದು ತಲೆಯಿಟ್ಟಾಗ, ಅದನ್ನು ನಮ್ಮ ಸಮೀಪಕ್ಕೆ ಸೇರಿಸದೆ, ದೂರಅಟ್ಟಬಿಡಬೇಕು.

೧೯ ನಾವುಯಾವಾಗ ಎಲ್ಲವನ್ನೂ ತ್ಯಜಿಸಿ ಬಿಡುವೆವೋ ಆಗೀಗ ನಾವು ಎಲ್ಲವನ್ನೂ ಜಯಿಸುವೆವು.

೨೦ ಯಾವುದರಲ್ಲಿಯೂ ಯೋಗ್ಯತೆಯೇ ಪ್ರಧಾನವಾದದ್ದೇಹೊರತು, ಸ್ಥಾನವು ಪ್ರಧಾನವಾದದ್ದಲ್ಲ.

೨೧ ಜಯವೆಂಬಬೀಗಕ್ಕೆ ಪಟ್ಟುಹಿಡಿಯುವುದೆಂಬುವದೇ ಮುಖ್ಯವಾದ ಕೈಯ್ಯಾಗಿರುವದು.

೨೨ ದೇಹಕ್ಕೆ ರಾತ್ರಿಯಾದಾಗ, ಜೀವಕ್ಕೆ ಹಗಲಾಗಿ ಇರುವದು.

೨೩ ಎಲ್ಲರೂ ಹಾಸಿಗೆಯಮೇಲೆ ಮಲಗಿಕೊಳ್ಳುವದಕ್ಕೆ ಮುಂಚಿತವಾಗಿ ಹೀಗೆ ಪ್ರತಿಜ್ಞೆಯನ್ನು ಮಾಡಿಕೊಳ್ಳಬೇಕು:— „ ನಾಳೆಯದಿನವೆಲ್ಲಾ ನಾನು ಶಾಂತಚಿತ್ತನಾಗಿಯೂ, ನೆಮ್ಮದಿಯಾಗಿಯೂ, ಯಿರುವೆನು. ಯಾವಕೋಪತಾಪ ಮೊದಲಾದದ್ದು ಬಂದಾಗ್ಯೂ, ಅದನ್ನೆಲ್ಲಾ ಕೂಡ್ಲೇ ಮರೆತುಬಿಡುವೆನು. ,,

೨೪ ಸುಖವಾಗಿ ಇರಬೇಕಾದರೆ ಯಾರಿಗಾದರೂ ಏನಾದರೂ ಒಂದು ಸಹಾಯವನ್ನು ಮಾಡಬೇಕು. ಭಗವಂತನು ಏನೇನು ಮಾಡಬಲ್ಲನೆಂಬುವದನ್ನು ಯೋಚಿಸಿ ನೋಡಿದರೆ, ನಾವು ಯಾವಕಾರ್ಯಕ್ಕೆ ಯತ್ನಿಸಿದರೂ ಜಯಿಸುವೆವೆಂಬುವದಕ್ಕೆ ಸಂದೇಹವೇಇಲ್ಲ.

ISRT

೨೬ ಯಾವದು ಹ್ಯಾಗೆ ಸಂಭವಿಸಿದರೂ, ಅದರಲ್ಲಿಯೇ ತೃಪ್ತಿಯನ್ನು ಹೊಂದಬೇಕು.

೨೭ ಪ್ರತಿಕೂಲವಾಗಿ ಕಾಣಬರುವದನ್ನೆಲ್ಲಾ ವಿರೋಧವಾದದ್ದೆಂದು ಭಾವಿಸಲಾಗದು. ಅದರಲ್ಲಿ ಗರ್ಭೀಕೃತವಾಗಿರುವ ಪರಮಾನುಗ್ರಹವನ್ನು ನಾವು ಎಂದಿಗೂ ಗಮನಿಸದೆ ಇರಬಾರದು.

೨೮ ನಾವು ಮಾಡುವದನ್ನೆಲ್ಲಾ ಸರಿಯಾಗಿ ಮಾಡಿಬಿಟ್ಟರೆ, ಅವುಗಳ ಫಲಿತಾಂಶವೂ ಕೂಡ ಸರಿಯಾಗಿಯೇ ಆಗುವದು, ಎಂಬುವದರಲ್ಲಿ ಸಂದೇಹವೇಯಿಲ್ಲ.

೨೯ ನಾವು ಯಾವಾಗಲೂ ಒಳ್ಳೇದನ್ನು ಎದುರು ನೋಡಿಕೊಂಡು, ಕೇಡಿಗೆ ಸಿದ್ಧಪಡಿಸಿಕೊಂಡು ಭಗವಂತನು ಅನುಗ್ರಹಿಸಿದ್ದರಲ್ಲಿ ತೃಪ್ತರಾಗಿಯೂ ಇರಬೇಕು.

೩೦ ನಮ್ಮನ್ನು ಭಗವಂತನು ಪ್ರಪಂಚದಲ್ಲಿ ಸೃಷ್ಟಿಸಿರುವದು, ನಮ್ಮಿಂದ ಎಷ್ಟು ಜನಕ್ಕೆ, ಎಷ್ಟು ಮಟ್ಟಿಗೆ, ಸಹಾಯ ಮಾಡಲಾದೀತೊ, ಅಷ್ಟನ್ನು ಮಾಡಬೇಕೆಂಬುವ ವುದ್ದೇಶ್ಯದಿಂದಲೇ ಹೊರತು ಮತ್ತು ಬೇರೆ ಅಲ್ಲವೆಂದು ತಿಳಿಯತಕ್ಕದ್ದು.

೩೧ ಒಳ್ಳೇ ಸಂದರ್ಭಗಳನ್ನು ಕಳೆದುಕೊಳ್ಳುವದು ಶುದ್ಧ ತಪ್ಪು.

೩೨ ನಾವು ನಮಗೆ ಯೇಂಥಾದ್ದಿರಲೆಂದು ಬಯಸಾಯಿ ಸುವುದಕ್ಕಿಂತಲೂ, ಭಗವಂತನು ನಮಗಾಗಿ ಬಯಸಾಯಿಸುವದು ವಿಶೇಷ ಶ್ಲಾಘನೀಯು ವಾಗಿರು ವದು.

೩೩ ನಮಗೆ, ಸುಖವಾಗಿ ಇರಬೇಕೆಂಬ ಅಪೇಕ್ಷೆಯಿದ್ದ ಪಕ್ಷದಲ್ಲಿ, ನಾವು ಒಳ್ಳೇಯುವರ ಸಾನ್ನಿಧ್ಯದಲ್ಲಿ ಇರುವಾಗ ಕಿವಿತೆರದುಕೊಂಡೂ, ಕೆಟ್ಟವರವು ಸ್ಯದಲ್ಲಿ ಯಿರುವಾಗ ಅದನ್ನು ಮುಚ್ಚಿಕೊಂಡೂ, ಇರಬೇಕು.

೩೪ ನಾವು ಕೆಟ್ಟದ್ದೆಂದು ತಿಳಿಯುವ ಅನೇಕವಿಷಯುಗಳು, ಆ ಸ್ವರೂಪದಲ್ಲಿ ಕಾಣಬರುವಂಥಾ ಒಳ್ಳೆಯುವೇ, ಎಂದು ತಿಳಿಯತಕ್ಕದ್ದು.

೩೫ ಪ್ರಪಂಚದಲ್ಲಿ ಕೆಟ್ಟದ್ದೆಂಬುವದೇ ಯಿಲ್ಲ. ನಾವು ಅನುಭವಿಸುವದೆಲ್ಲಾ ನಮಗೆ ಒಳ್ಳೇದಕ್ಕೇನೇ ಆಗಿ ಯಿರುವದು.

೩೬ ಭಗವಂತನು ನಮ್ಮ ಕೋರಿಕೆಗಳನ್ನ ಕೊಡಲು ಹಿಂಜರಿಯುವಂತೆ ಕಂಡುಬಂದಾಗ್ಯೂ, ಆಗಲೂಕೂಡ ಅವನು ನಮ್ಮನ್ನ ಅನುಗ್ರಹಿಸುವನೆಂಬುವದೇ ಸಿದ್ಧ.

೩೭ ಅನೇಕ ಸಂದರ್ಭಗಳಲ್ಲಿ ನಮಗೆವುಂಟಾಗುವ ವಿಪತ್ತುಗಳು, ನಮ್ಮಗಳ ಅನುಕೂಲಕ್ಕೇನೇ ಪರಿಣಾಮಿಸುವವು.

ISRT

೩೮ ಕಷ್ಟಬಂದಷ್ಟೂ ಅದು ಖ್ಯಾತಿಗೆ ಅವಕಾಶಕೊಡುವದು.

೩೯ ಕೋಪದಿಂದ ಕೂಡಿದ ಸೂತು, ಕುಮುದೊಯು ನಾಡಿಯುನ್ನು ಕೂಡ ವೇಗಪಡಿಸುವದು.

೪೦ ಅಹಂಕಾರವನ್ನು ಬಿತ್ತಿದರೆ, ನಿರಾಶೆಯನ್ನು ಫಲವಾಗಿ ಹೊಂದಬೇಕಾಗುತ್ತೆ.

೪೧ ನಾವು ವುಪಯೋಗಿಸದ್ದು ನಮಗೆ ಅನವಶ್ಯಕವಾದದ್ದು. ಆದ್ದರಿಂದ ಆದುನಮಗೆ ಬರೀಭಾರವಾಗಿಯೇ ಯಿರುವದು.

೪೨ ಕೋಪಕ್ಕೆ ಕಾರಣಭೂತವಾದಂಥಾ ವಿಷಯವು ನಮಗೆ ಹಾನಿ ಉಂಟುಮಾಡುವುದಕ್ಕಿಂತಲೂ, ನಮ್ಮ ಕೋಪವೇ ನಮಗೆ ವಿಶೇಷ ಹಾನಿಕರವಾಗಿ ಯಿರುವದು.

೪೩ ಮನುಷ್ಯನು ತನ್ನ ಪರಿವಾರವನ್ನು ಹೆಚ್ಚಿಸಿಕೊಂಡು ಹೋದಹಾಗೆಲ್ಲಾ, ತನ್ನ ಶಕ್ತಿಯನ್ನು ತಗ್ಗಿಸಿ, ಕುಗ್ಗಿಸಿಕೊಂಡು ಹೋಗುವನು.

೪೪ ಕಷ್ಟಬಂದಾಗ ಅದನ್ನು ಅತಿಗಾಂಭೀರ್ಯದಿಂದ ಸಹಿಸಿಕೊಳ್ಳುವದೇ ನಮ್ಮ ಒಳ್ಳೇ ಅದೃಷ್ಟವಾಗಿಯಿರುವದು.

೪೫ ಸಾವು ಯೆಂಬುವದು, ಪಂಚಭೂತಗಳು ತಮ್ಮ ತಮ್ಮ ಮೂಲಪ್ರಕೃತಿಗೆ ಬೇರೆಬೇರೆಯಾಗಿಸೇರಿ ಹೋಗುವದೇ ಹೊರತು, ಮತ್ತು ಬ್ಯಾರೆಅಲ್ಲ

ISRT

೪೬ ನಿತ್ಯವೂ ಭಗವಂತನು, ನಮಗೆ ಅನುಗ್ರಹಿಸಿರು
ವಂಥಾ ಅಸಂಖ್ಯಾತವಾದವಿಷಯಗಳನ್ನು ಧ್ಯಾನಿ
ಸಿಕೊಂಡು, ನಾವು ಸಂತೋಷಿಸತಕ್ಕದ್ದು.

೪೭ ತೃಪ್ತಿಯೆಂಬುವದು ಕಮ್ಮಿಯಾದ ಅಪೇಕ್ಷೆಯ
ಲ್ಲಿ ಯಿರುವದೇ ಹೊರತು, ಹೆಚ್ಚು ಐಶ್ವರ್ಯದಲ್ಲಿ
ಯಿರುವದಿಲ್ಲ.

೪೮ ಆತ್ಮನಿಗ್ರಹವು ಆರಂಭದಲ್ಲಿ ಎಷ್ಟುಕಷ್ಟವಾಗಿ
ಯಿದ್ದರೂ, ಕ್ರಮಶಃ, ಅಭ್ಯಾಸದಿಂದ ಅತಿಸು
ಲಭವಾಗಿಯೂ, ಅತ್ಯಾನಂದಕರವಾಗಿಯೂ,
ಇರುವದು.

೪೯ ಮನುಷ್ಯನನ್ನು ಸರಿಯಾದದಾರಿಯಲ್ಲಿ ಕರದು
ಕೊಂಡು ಹೋಗಲು ಸಾಮರ್ಥ್ಯವುಳ್ಳಂಥಾದ್ದು,
ತತ್ವಜ್ಞಾನವೆ ಹೊರತು ಮತ್ತು ಬ್ಯಾರೆಇಲ್ಲ.

೫೦ ನಮ್ಮ ಕೆಟ್ಟಜೀವನವೇ, ನಾವುಸಾವಿಗೆ ಭಯಪ
ಡುವುದಕ್ಕೆ ಕಾರಣವಾಗಿ ಇರುವದು.

೫೧ ವಳ್ಳೇನುಡಿಗಿಂತಲೂ, ವಳ್ಳೇನಡತೆಯೇ, ಶ್ರೇ
ಷ್ಟವಾದದ್ದು. ವಳ್ಳೇನುಡಿ ಬರೀಬಾಯಿಮಾತಾ
ಗಿ ಯಿರುವದು, ಆದರೆ ವಳ್ಳೇನಡತೆ ಎಂಬುವ
ದು ನಿಜವಾಗಿ ಕಾರ್ಯಕಾರಿಯಾದದ್ದು.

೫೨ ರಾಜ್ಯವನ್ನು ಜಯಿಸುವವನಿಗಿಂತಲೂ, ತನ್ನ ಅ
ಹಂಕಾರವನ್ನು ಅಡಗಿಸಿಕೊಳ್ಳುವನೇ ಉತ್ತಮ
ನಾಗಿ ಯಿರುವನು.

ISRT

೫೩ ಬುದ್ಧಿವಂತನ ಒಂದು ದಿವಸವು, ಅವಿವೇಕಿಯ ಪೂರ್ಣ ಆಯುಃ ಪರಿಮಿತಿಗೆ ಸಮಾನವಾಗಿ ಯಿರುವದು.

೫೪ ನಾವೆಲ್ಲರೂ ಮೊದಲು ನಮ್ಮನ್ನೇ ಜಯಿಸಿಕೊಳ್ಳಬೇಕು. ಹೀಗೆಮಾಡಲು, ನಮ್ಮ ಮನಸ್ಸಿನಲ್ಲಿಯಿರುವ ಅಂತರಾತ್ಮನನ್ನು ನಮಗೆ ಸೇನಾಧಿಪತಿಯನ್ನಾಗಿ, ಮಾಡಿಕೊಳ್ಳಬೇಕು

೫೫ ನಮ್ಮಕೈಲಿ ಆವವರಿವಿಗೂ ವಂಚನೆಯಿಲ್ಲದೇ ಮಾಡಿದ್ದೇಆದರೆ, ಅದು ಅಪಜಯ ವೆನಿಸಿಕೊಳ್ಳುವದಿಲ್ಲ.

೫೬ ಹೃದಯವನ್ನು ನಿಧಾನಗುಣದಿಂದ ತುಂಬಿ, ಕೈಗಳನ್ನು ಕೆಲಸದಲ್ಲಿ ಓಡಿಸಬೇಕು.

೫೭ ನ್ಯಾಯ ವಾದದ್ದನ್ನೂ, ಒಳ್ಳೇಯ ದಾದದ್ದನ್ನೂ ಮಾಡುವುದಕ್ಕಿಂತಲೂ, ಅಧಿಕವಾಗಿ ಶ್ಲಾಘನಿಯವಾದದ್ದು ಯಾವದೂ ಯಿಲ್ಲ.

೫೮ ಮನುಷ್ಯನು ಕೆಲಸಕಾರ್ಯಗಳಲ್ಲಿ ಆಸಕ್ತನಾಗಿದ್ದರೆ ಆನಂದಭರಿತನಾಗಿರುವನು.

೫೯ ತಕ್ಕಯೋಗ್ಯತೆಯೂ ನಿಧಾನದಿಂದೊಡಗೂಡಿದ ಕಾರ್ಯಶಕ್ತಿಯೂ, ಖಂಡಿತವಾಗಿ ಸಫಲವಾಗಿ ಯಿರುವದು.

೬೦ ಪುಸ್ತಕಗಳೆ ನಮಗೆನಿಜವಾದ ಸ್ನೇಹಿತರುಗಳು ಅವುಗಳು ನಮ್ಮ ವ್ಯಾಕುಲಗಳನ್ನೆಲ್ಲಾ ಹೋಗ

ISRT

ಮಾಡಿಸಿ ನಮ್ಮ ಮನಸ್ಸನ್ನು ಆನಂದಪಡಿಸುವವು.

೬೧ ಓ ವಿಧಿಯೇ! ನಾನು ಯಾವದಾರಿಯಲ್ಲಿ ಹೋಗ
ಬೇಕೆಂದು ನಿನ್ನ ಆಜ್ಞೆಯಿಧೆಯೋ ಅದೇದಾರಿ
ಯಲ್ಲಿಯೇ ನನ್ನನ್ನು ಕರದುಕೊಂಡು ಹೋ
ಗು ವಿನ್ನ ಬೇಕು.

೬೨ ಸಮಸ್ತವನ್ನೂ ಸೃಷ್ಟಿಸಿದಂಥಾ ಭಗವಂತನಿಗೆ
ಒಂದುದೊಡ್ಡದು, ಮತ್ತೊಂದು ಚಿಕ್ಕದು, ಎ
ನ್ನುವ ಭೇದವಿಲ್ಲ.

೬೩. ಮನುಷ್ಯರು ಮಾಡಬೇಕೆಂದು ಯಿಷ್ಟಪಡುವ
ಕಾರ್ಯಕ್ಕೆಲ್ಲಾ ವಿರಾಮವನ್ನು ಮಾಡಿಕೊಳ್ಳ
ಬಲ್ಲರು. ಮನಸ್ಸು ಯಿಲ್ಲದ ದೋಷವೇ ಹೊರ
ತು ವಿರಾಮವಿಲ್ಲದ ದೋಷವಲ್ಲ.

೬೪ ಸಮಸ್ತವಾದ ಐಶ್ವರ್ಯಕ್ಕಿಂತಲೂ, ಜ್ಞಾನವೆಂಬ
ಸರಸ್ವತೀ ಭಂಡಾರವು ಬಹಳಶ್ಲಾಘ್ಯವಾದದ್ದು.

೬೫ ತನ್ನನ್ನು ತಾನು ಅಡಗಿಸಿಕೊಳ್ಳುವದೇ ಎಲ್ಲ
ಕ್ಕಿಂತಲೂ ಹೆಚ್ಚಾದ ಜಯಭೇರಿಯಾಗಿರುವದು.

೬೬ ಹೊತ್ತು ಎಂಬುವದು ಹಕ್ಕಿಯಂತೆ ರೆಕ್ಕೆಗಳಿಂದ
ಕೂಡಿದ್ದಾಗಿಧೆ. ಅದು ಕಾಲವನ್ನು ನಾವು ಯಾ
ವರೀತಿಯಲ್ಲಿ ವ್ರಪಯೋಗಿಸುತ್ತೇವೆಂಬುವ ವಾ
ರ್ತೆಯನ್ನು, ಕಾಲಕ್ಕೆ ನಿಯಾಮಕನಾದ ಭಗ
ವಂತನ ಸನ್ನಿಧಿಗೆ ತೆಗೆದುಕೊಂಡುಹೋಗಿ ತಿಳಿ
ಸುತ್ತಲಿರುವದು.

ISRT

೬೭ ಎಲ್ಲಾ ವಿಷಯಗಳನ್ನೂ ಕೊಂಚಕೊಂಚವಾದರೂ ತಿಳಿದುಕೊಂಡು, ಕೊಂಚ ವಿಷಯಗಳಲ್ಲಾದರೂ ಪೂರ್ಣ ಜ್ಞಾನವನ್ನು ಸಂಪಾದಿಸಬೇಕು.

೬೮ ಒಂದು ಚಿಕ್ಕ ಕೊಠಡಿಯಲ್ಲಿ ಸರಸ್ವತೀ ಭಂಡಾರವೆಂಬುವದು ಒಂದು ಶ್ಲಾಘ್ಯವಾದ ಭಾಗ್ಯವಾಗಿ ಯಿರುವದು.

೬೯ ನಿತ್ಯವೂ ಕೊಂಚಮಟ್ಟಿಗೆ ಅಂಗಸಾಧನೆಯನ್ನು ಮಾಡಲು ವಿರಾಮವಿಲ್ಲವೆಂಬುವರು, ಕಾಯಿಲೆ ಮಲಗಲು ವಿರಾಮಮಾಡಿಕೊಳ್ಳಬೇಕಾಗುವದು.

೭೦ ಯಾರನ್ನು ನೀವು ಸಂಧಿಸಿದರೂ ಅವರನ್ನು ನಾವು ಮರ್ಯಾದೆಯಿಂದ ಕಾಣಬೇಕು.

೭೧ ನಿಜವಾಗಿಯೂ, ಆಪ್ತರಾಗಿಯೂ, ಯಿರುವ ಸ್ನೇಹಿತರುಗಳು ಯಿಲ್ಲದವರಿಗೆ, ಪ್ರಪಂಚವು ಒಂದು ಕಾಡಿನಂತೆ ಯಿರುವದು.

೭೨ ಅತೀ ಚಮತ್ಕಾರವುಳ್ಳವರು ವಿದ್ಯಾವ್ಯಾಸಂಗವನ್ನು ನಿಂದಿಸುವರು; ತಿಳಿಯದ ಮೂಢರು ಬರೀ ಆಶ್ಚರ್ಯವನ್ನು ಪಡುವರು; ಆದರೆ ಬುದ್ಧಿವಂತರಾದವರು ಆ ವಿದ್ಯವನ್ನೆಲ್ಲಾ ಚನ್ನಾಗಿ ವುಪಯೋಗಕ್ಕೆ ತಂದು ಕೊಳ್ಳುವರು.

೭೩ ಪ್ರತಿಯೊಂದು ದಿನವೂ ಆಯುಸ್ಸಿನ ಅಲ್ಪವಾದ ಭಾಗವಾಗಿಯೇ ಯಿರುವದು.

ISRT

೨೪ ಕಾಲವೇ ಧನವೆನ್ನುವದೂ ಅಲ್ಲದೆ, ಅದು ಅಷ್ಟೇ ಆಯುಸ್ಸಾಗಿಯೂ ಇರುವದು.

೨೫ ನಮಗೆ ಸಾಧ್ಯವಾದ್ದರಲ್ಲಿ ನಾವು ತೃಪ್ತಿಯನ್ನು ಹೊಂದಬೇಕು.

೨೬ ಪ್ರತಿಯೊಂದು ನಿಮಿಷವನ್ನೂ, ವ್ಯರ್ಥ ಮಾಡದೆ ಉಪಯೋಗಿಸಿಕೊಂಡು, ಆನಂದವನ್ನು ಹೊಂದತಕ್ಕದ್ದು.

೨೭ ಸೋಮಾರಿತನಕ್ಕೆ ಸಮಾನವಾದ ಹಲಾಕು ಮತ್ತಾವದೂ ಇಲ್ಲ.

೨೮ ಪುಸ್ತಕವಿಲ್ಲದ ಕೊಠಡಿಯು, ಜೀವವಿಲ್ಲದ ದೇಹಕ್ಕೆ ಸಮಾನವಾಗಿರುವದು.

೨೯ ಅವಿವೇಕಿಯು ಅಲೆಯುವನು, ವಿವೇಕಿಯು ಸಂಚರಿಸುವನು,

೩೦ ನಮಗೆ ತಿಳಿಯದೆಯಿರುವ ವಿಷಯಗಳೆಂಬ ಸಮುದ್ರದ ಮುಂದೆ, ನಮಗೆ ತಿಳಿದಿರುವುದೆಂಬುವ ವಿಷಯವು ಒಂದು ಬಿಂದುವಿನೋಪಾದಿಯಲ್ಲಿರುವದು.

೩೧ ಜ್ಞಾನವು ಆನಂದಕರವಾದದ್ದೂ ಅಲ್ಲದೆ ಪೌರುಷವನ್ನುಳ್ಳದ್ದಾಗಿಯೂ ಇರುವದು.

೩೨ ವಿಪತ್ತುಗಳು ವಿವೇಕೋಪದೇಶಿಗಳಾಗಿ ಇರುವವು.

೩೩ ವಿಧಿಪ್ರಾಪ್ತವಾದ ಸಂಕಟಗಳು ವಿಶೇಷ ಆನಂದಪ್ರದವಾದದ್ದಾಗಿಯೇ ಇರುವವು.

ISRT

೮೪ ನಾವು ರುಜುವಾದ ಮಾರ್ಗದಲ್ಲಿ ಇದ್ದ ಪಕ್ಷದಲ್ಲಿ, ನಮ್ಮನ್ನು ಯಾರೂ ತಗ್ಗಿಸಿ, ಬೊಗ್ಗಿಸಲಾರರು.

೮೫ ವಿವೇಕಿಗೆ ಆನಂದಕರವಾದ ವಿಷಯಗಳಲ್ಲಿ ಪಾಮರರು ಗಣನೆಯನ್ನು ಕೊಡರು. ಅದರ ರುಚಿಯನ್ನು ಅವರು ಅರಿಯರು. ಪಾಮರರಿಗೆ ಆಹ್ಲಾದವನ್ನುಂಟುಮಾಡುವ ವಿಷಯಗಳಲ್ಲಿ ವಿವೇಕಿಗಳು ಗಮನವನ್ನು ಕೊಡರು. ಅವರು ಅದನ್ನೆಲ್ಲಾ ತುಚ್ಛವಾದದ್ದೆಂದು ಭಾವಿಸುವರು.

೮೬ ನಮಗೆ ಆನಂದವನ್ನುಂಟು ಮಾಡುವಂಥದ್ದೆಲ್ಲಾ ಹಿತಕರವಾಗಿ ಯಿರಲಾರದು.

೮೭ ಭಗವಂತನು ಏನುಮಾಡಿದರೂ ನಮ್ಮಕ್ಷೇಮಕ್ಕೇನೇ ಮಾಡುವನು.

೮೮ ಎಲ್ಲವೂ ವಿಪರೀತವಾದನಂತರ, ಶೀಘ್ರದಲ್ಲಿಯೇ ಆವೇಗವೆಲ್ಲಾ ಯಿಳಿದು, ಶಾಂತವಾಗುವದು.

೮೯ ಮೇಲ್ನಡೆಯಲ್ಲಿ ತೋರ್ಪಡುವದರಮೇಲೆ ನಾವು ತೀರ್ಮಾದಿಸಲಾಗದು.

೯೦ ನಮಗೆ ಭಗವಂತನಲ್ಲಿ ಯಿರುವ ಭಕ್ತಿಯು ಚಲಿಸದಂಥಾದ್ದಾಗಿರಬೇಕು.

೯೧ ದೊಡ್ಡದೊಡ್ಡ ಸ್ನೇಹಿತರು ಎಷ್ಟುಜನಯಿದ್ದರೂ ಸಾಲದ್ದಾಗಿಯೂ, ಒಬ್ಬ ಅಲ್ಪಶತ್ರುವು ಇದ್ದರೂಕೂಡ ವಿಪರೀತ ಹೆಚ್ಚಾಗಿಯೂ, ಇರುವದು. ಯಾವಶತ್ರುವನ್ನೂ ಅಲಕ್ಷ ಮಾಡಲಾಗದು.

೯೧ ಒಬ್ಬನಿಗೆ ಸಹಸ್ರಮಂದಿ ಸ್ನೇಹಿತರುಗಳು ಇದ್ದರೂ ಸಮಯಕ್ಕೆ ಒಬ್ಬನೂ ಒದಗುವದಿಲ್ಲಾ. ಕೇವಲ ಒಬ್ಬ ವಿರೋಧಿ ಇದ್ದಾಗ್ಯೂ ಅವನನ್ನ ಅವನು ಎಲ್ಲಿಯೂ ಸಂಧಿಸುವನು.

೯೨ ಪ್ರಥಮತಃ ಸ್ನೇಹವನ್ನು ಮಾಡುವುದಕ್ಕೆ ಎಷ್ಟು ಎಚ್ಚರಿಕೆ ಇರಬೇಕೋ, ನಂತರ ಅದನ್ನು ನಿಲ್ಲಿಸಿಕೊಳ್ಳುವದಕ್ಕೂ ಅಷ್ಟು ಅವಶ್ಯಕವಾಗಿ ಇರುವದು.

೯೩ ನಮ್ಮ ವೇಷಕ್ಕಿಂತಲೂ, ಕಾರ್ಯಕ್ಕಿಂತಲೂ, ವಿಶೇಷವಾದದ್ದು ನಮ್ಮ ಇರುವಿಕೆಯಾಗಿ ಇರುವದು.

೯೪ ಹೆಚ್ಚು ತಿಳುವಳಿಕೆ ಇದ್ದಷ್ಟೂ, ವ್ಯರ್ಥಕಾಲಹರಣೆಗಾಗಿ ಹೆಚ್ಚು ವ್ಯಥೆಯುಂಟಾಗುವದು.

೯೫ ನಾವು ಕಾಲವನ್ನು ವಿನಿಯೋಗಿಸಿದ ಕ್ರಮವು ಭಗವಂತನಲ್ಲಿ ಪ್ರತಿ ನಿಮಿಷದಲ್ಲಿಯೂ ರಿಪೋರ್ಟು ಆಗುವುದಾದ್ದರಿಂದ, ಅದು ವ್ಯರ್ಥವಾಗಿಯೇ ಆಗಲಿ, ಅವಿವೇಕವಾಗಿಯೇ ಆಗಲಿ, ಉಪಯೋಗಿಸಿದಂತೆ ಸುದ್ದಿ ಹೋಗಲು ಅವಕಾಶಕೊಡಬಾರದು.

೯೬ ಕಾರ್ಯಸ್ಥನನ್ನು ಪಿಶಾಚಿಯು ಕೆಣಕಲು ಬರುವದು, ಆದರೆ ಸೋಮಾರಿಯಾದಂಥಾವನು ಅದನ್ನೇ ಕೆಣಕಲು ಹೋಗುವನು.

ISRT

೯೮ ಅನೇಕ ಜನಿಗಳಲ್ಲಿ ಕಾಲವು ಅನೇಕವಿಧವಾಗಿ ಓಡುವದು.

೯೯ ದೇವರ ಧರ್ಮಶಾಸ್ತ್ರವೆಲ್ಲಾ, ‘ ಪ್ರೀತಿ, ಎಂಬುವ ಎರಡುಅಕ್ಷರದಲ್ಲಿ ಅಡಗಿಧೆ. ಇತರರ ತಪ್ಪಿತಗಳನ್ನು ಕ್ಷಮಿಸುವದಕ್ಕಾಗಿಯೇ ನಮಿಗೆ ಅವುಗಳನ್ನು ಜ್ಞಾಪಿಸಿಕೊಳ್ಳುವ ಸಾಮರ್ಥ್ಯವನ್ನು ಕೊಟ್ಟು ಇರುವನು.

೧೦೦ ಕಾಲವು ಓಡುವುದಕ್ಕಿಂತಲೂ ನಾವು ಅದನ್ನು ಕಳೆಯುವದು ವಿಶೇಷವಾಗಿ ಯಿರುವದು.

೧೦೧ ಮನೆಯಸೌಖ್ಯವು ಹೊರಗೆಹೋಗಿ ಬಂದವನಿಗೆ ಗೊತ್ತಾಗುವದೇ ಹೊರತು, ಅಲ್ಲಿಯೇ ಕೂತಿರುವವನಿಗೆ ಗೊತ್ತಾಗುವದಿಲ್ಲಾ.

೧೦೨ ನಮ್ಮನ್ನು ನಮ್ಮಸರಿಯುವರೆಲ್ಲರೂ, ‘ ಅವರತಲೆ ಪಾಡಿದ್ದಂತೆ ಮಾಡಿಕೊಳ್ಳಲಿ, ಎಂದುಬಿಟ್ಟಾಗ್ಯೂ. ನಾವು ಧೈರ್ಯವನ್ನು ಬಿಡಬಾರದು.

೧೦೩ ನಮಗೆನಾವು ಒಂದು ಗೌರವವನ್ನು ಕೊಟ್ಟುಕೊಂಡು, ನಮ್ಮನ್ನು ನಾವೇ ಚನ್ನಾಗಿ ತಿಳಿದುಕೊಂಡು, ಅಡಗಿ ಹೋಗುವದ್ದರಿಂದ, ನಮಗೆ ಒಂದು ಗೌರವವು ಉಂಟಾಗುವದು. ನಾವು ಅಪೇಕ್ಷಿಸದೇನೇ ಅಧಿಕಾರವೂ ಗೌರವವೂ ನಮಗೆ ಬಂದು ಸೇರುವದು.

೧೦೪ ನಾವು ಕಾಲವನ್ನು ವ್ಯರ್ಥವಾಗಿಕಳೆದರೆ, ಆಕಾಲವೂಕೂಡ ನಮ್ಮನ್ನು ಅಪ್ರಯೋಜಕರನ್ನು

ISRT

ಮಾಡಿ, ನಮ್ಮ ಆಯುಸ್ಸನ್ನು ಕಳದುಬಿಡುವದು, ಎಂಬ ಜ್ಞಾನವು ' ಕೆಟ್ಟ ಮತ್ತೆ ಬುದ್ಧಿ ಬಂತು, ಎಂಬುವಪ್ರಕಾರ, ಅನೇಕರಿಗೆ ಕಾಲ ಮಿಂಚಿಹೋದಾಗ ತಿಳಿಯಬರುವದು.

೧೦೫ ಸ್ನೇಹಿತರುಗಳನ್ನು ಅವರ ಯೋಗ್ಯತೆಗಾಗಿ ಚುನಾಯಿಸಬೇಕೇ ಹೊರತು ಅವರ ಆಸ್ತಿಗಾಗಿ ಅಲ್ಲ.

೧೦೬ ಪಾಠಶಾಲೆಗಳು ನಮ್ಮನ್ನು ಪರೀಕ್ಷೆಯನ್ನು ಕೊಡಲು ಅರ್ಹರನ್ನಾಗಿ ಮಾಡಬಲ್ಲವೇ ಹೊರತು, ನಮ್ಮನ್ನು ಪ್ರಪಂಚಕ್ಕೆ ಪ್ರಯೋಜಕರನ್ನಾಗಿಮಾಡಲು ಅವುಗಳಿಗೆ ಯೋಗ್ಯತೆಸಾಲದು.

೧೦೭ ಜ್ಞಾಪಕಶಕ್ತಿಯನ್ನು ವಿಶೇಷವಾಗಿ ವೃದ್ಧಿಗೆತಂದುಕೊಂಡು, ಬುದ್ಧಿಕ್ಲೇಶ ಮಾಡಿಕೊಳ್ಳುವದಕ್ಕಿಂತಲೂ, ನಮ್ಮ ಬುದ್ಧಿಯನ್ನು ನಾವು ಚಲೋದಾಗಿ ಮಾಡಿಕೊಳ್ಳುವದು ಬಹಳ ಉತ್ತಮ, ಮತ್ತು ಅವಶ್ಯಕವಾದ, ಕೆಲಸವಾಗಿ ಇರುವದು.

೧೦೮ ಮೊದಲು ವಿಚಾರಮಾಡಿ, ನಂತರ ಕಾರ್ಯದಲ್ಲಿ ಪ್ರವರ್ತಿಸುವಂತವನನ್ನು, ಭಾಗ್ಯವು ತಾನಾಗಿಯೆ ತನ್ನ ಒಡೆಯನಾಗಿ ಇರಬೇಕೆಂದು ಬಯಸುವದು.

೧೦೯ ಯಾವನಷ್ಟ ಸಂಭವಿಸಿದಾಗ್ಯೂ, ಅವಲೀಲೆಯಾಗಿಯೇ ನಾವು ಅದನ್ನು ಸಹಿಸಿಕೊಳ್ಳತಕ್ಕದ್ದು.

೧೧೦ 'ಲಲಾಟ ಲಿಖಿತಾರೇಖಾ ಪರಿಮಾರ್ಷ್ಟುಂ ನಶಕ್ಯತೇ' ಎಂಬಂತೆ, ನಮ್ಮ ಹಣೆಯಲ್ಲಿ ಭಗವಂತನು ಬರದದ್ದನ್ನು ನಾವು ತಪ್ಪಿಸಲೂ ಆಗುವದಿಲ್ಲ, ಹಾಗೆ ಬರಿಯದೇ ಇರುವದು ಸಂಭವಿಸಲೂ ಸಾಧ್ಯವಿಲ್ಲ, ವೆಂದು ಖಂಡಿತವಾಗಿ ತಿಳಿಯತಕ್ಕದ್ದು.

೧೧೧ ಮಹಾ ಯೋಗಿಯಾವಂಥಾ ಪುರುಷನು, ನನ್ನದು ನನ್ನದುಹ್ಯಾಗೋ, ಹಾಗೆಯೇ ನನ್ನದೂ ನಿನ್ನದೆನ್ನುವನು.

೧೧೨ ಎಂದಿಗೂ ನ್ಯಾಯದಲ್ಲಿ ಪ್ರೀತಿಯಿಡು. ನೈಜಭಾವವು ಹೊರಗೂ ವಳಗೂ ಒಂದೇ ರೀತಿಯಾಗಿ, ಸುಂದರವಾಗಿರುವದು.

೧೧೩ ಜಾಗರೂಕತೆಯೇ ಜಯವಾಗಿರುವದು. ನಮ್ಮ ಬುದ್ಧ್ಯಾ ನಾವು ಸರಿಯಾಗಿ ನಡೆದುಕೊಂಡದ್ದೇ ಆದರೆ, ಅದನ್ನು ಎಲ್ಲರೂ ಕೂಡ ಸರಿಯಾದದ್ದೆಂದೇ ಹೇಳುವರು.

೧೧೪ ಒಬ್ಬನು ಶ್ಲಾಘ್ಯವಾದ ಗುಣವನ್ನುಳ್ಳವರ ಹಾಗೆ ತಾನೂ ಇರಬೇಕೆಂದು ಅಪೇಕ್ಷಿಸುವುದಕ್ಕಿಂತಲೂ, ಆ ಶ್ಲಾಘ್ಯವಾದ ಗುಣಗಳೆಲ್ಲಾ ತನ್ನಲ್ಲಿಯೇ ಮೂರ್ತಿಕರಿಸಿ, ತಾನೇ ಆಗುಣಮಯವಾದ ವಿಗ್ರಹದೋಪಾದಿಯಲ್ಲಿ ಇರಲು, ಬಯಿಸಬೇಕು ಆಗಾಗ ಭಗವಂತನಿಗೆ ಪೂರ್ಣ ತೃಪ್ತಿ ಯುಂಟಾಗುವದು.

೧೧೫ ಸಂಕಟಗಳು ನಮಗೆ ಪ್ರಾಪ್ತವಾದಷ್ಟು ನಮ್ಮ ಅನುಭವವು ಹೆಚ್ಚಿ, ನಾವು ವಿವೇಕಿಗಳಾಗುವೆವು

೧೧೬ ನಮ್ಮೊಳಗೆ ಇಲ್ಲದ್ದು ಹೊರಗೆ ತೋರಿಬರದು. ಅಂದರೆ, ಹೊರಗಿನದೆಲ್ಲ ಒಳಗಿನವಿಷಯಗಳಿಗೆ ಕನ್ನಡಿಯಂತೆ ಇರುವದು.

೧೧೭ ಸತ್ಯವೆಂಬುವದೇ ನಮ್ಮ ಜೀವಿತಕಾಲದಲ್ಲಿಯೂ ಅಂತಿಮ ಕಾಲದಲ್ಲಿಯೂ, ನಮಗೆ ಮುಖ್ಯ ಯುಧವಾಗಿ ಇರುವದು.

೧೧೮ ಮನುಷ್ಯನು ಸತ್ಯವನ್ನು ಎಡಬಿಡದೆ, ಅದನ್ನೇ ಎಂದಿಗೂ ಅಂಟಿಕೊಂಡಿದ್ದರೆ, ಅವನಿಗೆ ಅದರಿಂದ ಬಂದುಗೌರವವು ವೃಂಟಾಗುವದಲ್ಲದೆ, ಆಸ್ಥಾನದಿಂದ ಅವನನ್ನು ಕದಲಿಸಲೂಕೂಡ ಅಸಾಧ್ಯವಾಗುವದು.

೧೧೯ ಆರಂಭದಲ್ಲಿ ನಾವೆಲ್ಲರೂ ನಮ್ಮನ್ನು ಇತರರು ಮೋಸಮಾಡದಂತೆ ಜಾಗರೂಕರಾಗಿ ನೋಡಿಕೊಳ್ಳಬೇಕೆಂದು ಇರುವೆವು. ಆದರೆ ನಾವು ಇತರರಿಗೆ ಮೋಸಮಾಡದಂತೆ ಇರಬೇಕೆಂಬ ಜ್ಞಾನವು ನಮಗೆ ಶೀಘ್ರದಲ್ಲಿಯೇ ಹುಟ್ಟುವದು. ಆಗೀಗ ಎಲ್ಲವೂ ಸರಿಯಾಗಿ ನಡೆಯುವದು.

೧೨೦ ನಾವು ಎಂದಿಗೂ ಆತುರಪಡಬಾರದು.

೧೨೧ ನಮಗೆ ಒಬ್ಬ ಸ್ನೇಹಿತನಿದ್ದ ಪಕ್ಷದಲ್ಲಿ, ಅವನನ್ನು ನಾವು ಜಾಗ್ರತೆ ನೋಡಿಕೊಂಡು ಬರಬೇ

ಕು. ಹಾಗೆಹೋಗಿ ನೋಡಿಕೊಂಡು ಹೊರದಿ
ದ್ದರೆ ಅವನಿಗೂ ನಮಿಗೂ ಮಧ್ಯೆ ಅನೇಕ
ಮುಳ್ಳುಗಳೂ, ಗುಟ್ಟೆಗಳೂ, ಬೆಳದು, ನಮ್ಮ
ಗಳ ಸ್ನೇಹಕ್ಕೇನೇ ಲೋಪಬರುವಂತೆ ಮಾಡು
ವದು.

೧೨೨ 'ಭಗವದಾಜ್ಞೆ ಇದ್ದಂತೆಯೇ ಇದ್ದುಕೊಂಡಿ
ರಬೇಕು' ಎಂಬುವದೇ ನಮ್ಮ ಪ್ರತಿಜ್ಞೆಯಾಗಿ
ಯೂ, ಕುತೂಹಲವಾಗಿಯೂ, ಇರಬೇಕು.
ದೈವಭಕ್ತಿಯಿಂದಲೂ, ಗುರುಭಕ್ತಿಯಿಂದಲೂ,
ಕೂಡಿದ ಸಾತ್ವೀಕರಾಗಿರಬೇಕು.

೧೨೩ ಕೈಲಾಗದವರಿಗೆ ಸಹಾಯ ಮಾಡಿಕೊಂಡು,
ನೊಂದವರ ನೋವನ್ನು ಶಮನಮಾಡುತ್ತಾ,
ಯಿರುವನೇ ಘನವುಳ್ಳ ಪುರುಷನೆನಿಸಿಕೊಳ್ಳು
ವನು.

೧೨೪ ನಮ್ಮಿಂದ ಮತ್ತೊಬ್ಬರಿಗೆ ಕಷ್ಟನಿಷ್ಠೂರಗಳು
ಬರದಂತೆ ನೋಡಿಕೊಳ್ಳುವದೂ, ಸ್ವಕಾರ್ಯಧು
ರಂಧರರಾಗಿ ಇರುವುದಕ್ಕಿಂತಲೂ, ಇತರರ
ಯೋಗಕ್ಷೇಮವನ್ನು ಮೊದಲು ವಿಚಾರಿಸಿಕೊ
ಳ್ಳುವದೂ, 'ಮನೆಯಿಂಟಕಿ ಮೇಮೇಪೆದ್ದ',
ಎನ್ನದಂತೆ ಇತರರಿಗೆಪೂಜ್ಯತೆಯನ್ನು ಕೊಡು
ವುದೂ,ಇದೆಲ್ಲಾ ಶಾಸ್ತ್ರೋಕ್ತವಾದ್ದಾಗಿಯೂ,
ವಿಶ್ವಾಸ ಪೂರ್ವಕ ವಾದ್ದಾಗಿಯೂ, ವಿನಯ

ISRT

ಮತ್ತು ವಿವೇಕದಿಂದಕೂಡಿದ್ದಾಗಿಯೂ, ಇರು
ವಂಥವುಗಳು ಎನ್ನುವುದಕ್ಕೆ ಸಂದೇಹವಿಲ್ಲ.

೧೨೫ ನಮ್ಮ ಸುತ್ತು ಮುತ್ತಲೂ ಇರುವರಿಗೆಲ್ಲಾ
ನಾವು ನೋವುಪಡಿಸದೆ, ಸಂತೋಷವನ್ನೇ ಉಂ
ಟುಮಾಡಬೇಕೆಂಬುವ ಅಭಿಲಾಷೆಯು, ನಮ್ಮ
ಸ್ವರೂಪ ಸ್ವಭಾವಗಳಿಗೇನೆ ಒಂದು ಅಲಂಕಾರ
ದೋಪಾದಿಯಲ್ಲಿರುವದು.

೧೨೬ ಒಬ್ಬ ಪರಸ್ಥಳೀಕನಿಗೆ ಒಪ್ಪತ್ತು ಊಟವನ್ನಾ
ಗಲಿ, ಒಂದುರಾತ್ರಿ ನಿದ್ರೆಮಾಡಲು ಜಾಗಕೊ
ಡುವದೇ ಆಗಲಿ, ಶ್ರೇಷ್ಟವಾದದ್ದೇಸರಿ. ಆದರೆ
ಧೈರ್ಯ ಕೆಟ್ಟಿರುವ ಮನುಷ್ಯನಿಗೆ, ‘ ಭಯಪಡಕೆ
ಲಸವಿಲ್ಲ, ಧೈರ್ಯವಾಗಿರು, ಎಂದು ಅವನಿಗೆ
ಭಾಷೆಕೊಡುವದು, ಆದಕ್ಕಿಂತಲೂ ಶ್ರೇಷ್ಟವಾ
ದ ಕೆಲಸವೆಂದು ತಿಳಿಯತಕ್ಕದ್ದು.

೧೨೭ ಭಗವಂತನು ಪ್ರಪಂಚದಲ್ಲಿ ನಮ್ಮನ್ನು ಸೃಷ್ಟಿ
ಸಿದ್ದರಿಂದ, ಪ್ರಜೆಗಳಿಗೆ ನಮ್ಮಿಂದ ಕಿಂಚವಾ
ದರೂ ಪ್ರಯೋಜನವಿರುವಂತೆ ನಾವು ನೋಡಿ
ಕೊಂಡು, ಅದರಲ್ಲಿ ಒಂದು ಆನಂದವನ್ನು
ಹೊಂದಬೇಕು.

೧೨೮ ನಮ್ಮನ್ನು ಭಗವಂತನು ಯಾವ ಅಂತಸ್ತಿನಲ್ಲಿ
ಇಟ್ಟಿದ್ದರೂ, ಆದರಲ್ಲಿಯೇ ನಾವು ಸಮಾಧಾನ
ವನ್ನು ಹೊಂದಬೇಕು.

ISRT

೧೨೯ ಯಾವಕೆಲಸದಲ್ಲಿನಾವು ಉದ್ಯುಕ್ತರಾದರೂ, ಭಗವಂತನಮೇಲೆ ಭಾರವನ್ನು ಹಾಕಿ, ಪೂರ್ಣನಂಬಿಕೆಯಿಂದ ಮಾಡಬೇಕು.

೧೩೦ ನಾವು ಸೊಂಟಕಟ್ಟಿಕೊಂಡು, ನಮ್ಮ ಶಕ್ತ್ಯನುಸಾರವಾಗಿ ಕಷ್ಟಪಡಲು ಯತ್ನಿಸಿದರೆ, ಭಗವಂತನು ನಮ್ಮಲ್ಲಿ ದಯೆಯನ್ನಿಟ್ಟು, ನಮ್ಮ ಸಹಾಯಕ್ಕೆ ಬರುವನು ಎಂಬುವದಕ್ಕೆ ಸಂದೇಹವೇಯಿಲ್ಲ.

೧೩೧ ಭಗವಂತನಲ್ಲಿ ನಂಬಿಕೆಯನ್ನಿಟ್ಟು, ಕೊಂಚವೂ ಶಂಕಿಸದೆ, ತ್ಯಾಗಮಾಡುವದು ಉತ್ತಮವೆಂದು ಯೋಚಿಸಿ, ಕಾರ್ಯಾಸಕ್ತರಾಗತಕ್ಕದ್ದು.

೧೩೨ ನಿಧಾನದಿಂದಲೂ ಸಾಧನೆಯಿಂದಲೂ ಕೂಡಿರುವನು, ಎಂಥಾ ಕಷ್ಟಕೆಲಸವನ್ನಾದರೂ ಸಾಧಿಸಬಲ್ಲನು.

೧೩೩ ಯಾವ ಅಶುದ್ಧಿಯೂ ನಮ್ಮನ್ನು ಅಂಟದಹಾಗೆ ನೋಡಿಕೊಳ್ಳಬೇಕು.

೧೩೪ ಈಶ್ವರನು ಸಹಾಯಮಾಡುವನು, ಎಂಬ ಧೃಢವಾದ ನಂಬಿಕೆಯನ್ನಿಟ್ಟುಕೊಂಡು, ಪ್ರವರ್ತಿಸುವ ಸಮಸ್ತ ಕಾರ್ಯದಲ್ಲಿಯೂ ಭಗವಂತನ ಅನುಗ್ರಹವು ಪೂರ್ಣವಾಗಿರುವದು

೧೩೫ ವಿಪರೀತವಾದಂಥಾ ದಶಾನುಭವವು ಕಳದುಹೋದನಂತರ, ಭಗವಂತನು ಸುಖಸಾಮ್ರಾಜ್ಯವ

ISRT

ನ್ನು ಕೊಡುವನು, ಎಂಬುವದರಲ್ಲಿ ಸಂದೇಹ ವಿಲ್ಲ.

೧೪೬ ಒಂದು ಉದ್ದೇಶ್ಯವೂ ಯಿಲ್ಲದೆ ಕಾಲವನ್ನು ಕಳೆಯುವದು, ಕಷ್ಟದೆಶೆಯಾಗಿಯೂ, ವ್ಯರ್ಥವಾದದ್ದಾಗಿಯೂ, ಇರುವುದು.

೧೪೭ ಎಷ್ಟೊಂದು ಕಷ್ಟ ಸಂಭವಿಸಿದಾಗ್ಯೂ, ಜಾಗರೂಕತೆ ಇಂದಲೂ, ಸಾಧಿಸಲೇ ಬೇಕೆಂಬುವ ಧೃಢಪ್ರತಿಜ್ಞೆಯಿಂದಲೂ, ಕೂಡಿದ್ದರೆ ಎಂಥಾ ಕಷ್ಟಕಾರ್ಯವನ್ನಾದರೂ ಸಾಧಿಸಬಹುದು.

೧೪೮ ಪ್ರಥಮತಃ ನಾವು ಪರಿಶುದ್ಧಾತ್ಮನಂತೆ ಇರಬೇಕೆಂದು ಯತ್ನಿಸಿ, ನಮಿಗೂ ಇತರರಿಗೂ ಸಹಾಯ ಭೂತರಾಗಿರುವಂತೆ ಕೆಲಸಕಾರ್ಯಗಳಲ್ಲಿ ಆಸಕ್ತರಾಗುವದು ಶ್ರೇಷ್ಟವಾದದ್ದು.

೧೪೯ ಎಲ್ಲಾ ಹೊತ್ತಿಗೂ ಕೆಲಸಗಳನ್ನು ವಿಂಗಡಿಸಿ, ನಿಯಮಿಸಿಕೊಂಡಿದ್ದರೆ, ಎಲ್ಲಾ ಕೆಲಸಕ್ಕೂ ಹೊತ್ತು ಸಿಕ್ಕುವದು.

೧೫೦ ಸಣ್ಣ ವಿಷಯಗಳಿಗಾಗಿ ನಾವು ಹೋರಾಡುವುದರಿಂದಲೂ, ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ಚನ್ನಾಗಿ ತಿಳಿದುಕೊಳ್ಳದೆ ಇರುವುದರಿಂದಲೂ, ಜಾಗರೂಕತೆಯಿಲ್ಲದೆ ದುಡುಕಿ ಮಾತುಗಳನ್ನಾಡುವುದರಿಂದಲೂ, ನಾವು ಬಹಳವಾಗಿ ಪೇಚಾಡುವೆವು.

ISRT

೧೪೧ ಜೀವಿಸಿ ಪ್ರಯೋಜನವಿಲ್ಲದೇಹೋದಾಗ ಮರಣವನ್ನು ಹೊಂದುವದೇ ಲೇಸು.

೧೪೨ ನಾವು ಯಾವಾಗಲೂ ಧೈರ್ಯದಿಂದಲೂ ಸಾಮರ್ಥ್ಯದಿಂದಲೂ ನಡೆದುಕೊಳ್ಳಬೇಕು.

೧೪೩ ಯಾರನ್ನೂ ಅವರಹಿಂದೆ ನಾವು ದೂಷಿಸಬಾರದು.

೧೪೪ ಅವಿವೇಕವಾದ ತುಚ್ಛ ಹರಟೆಗಳಲ್ಲಿ ಸೇರಬಾರದು.

೧೪೫ ನಾವು ನೆಮ್ಮದಿಯಾಗಿದ್ದುಕೊಂಡು, ಇತರರನ್ನೂ ಚನ್ನಾಗಿಬದುಕಿ ಬಾಳುವಂತೆ ಮಾಡಬೇಕು.

೧೪೬ ಮರ, ಕಲ್ಲು, ಮುಂತಾದವುಗಳಲ್ಲಿ ಭಗವಂತನು ಇದ್ದಾನೆಂದು ತಿಳಿಯದವನು, ಮಾಂಸ, ಅಸ್ಥಿಮಯವಾದ ಶರೀರಗಳಲ್ಲಿಯೂಕೂಡ, ಭಗವತ್ಸಾನ್ನಿಧ್ಯ ಇದೆಯೆಂದು ಗ್ರಹಿಸಲಾರನು.

೧೪೭ ಯಾವಕೆಲಸವನ್ನೂ ದುಡುಕಿ ಮಾಡಬಾರದು.

೧೪೮ ನಮಗೆ ಲಭ್ಯವಾಗಿರುವ ಒಳ್ಳೇಸಂಧರ್ಭಗಳನ್ನೆಲ್ಲಾ ನಾವು ಅನ್ಯಾಯವಾಗಿ ಭಾವಿಸುವದು ತಪ್ಪು.

೧೪೯ ಕಾಣಬರುವದನ್ನೆಲ್ಲಾ ನಿಜವೆಂದು ನಂಬಿದರೆ ನಾವು ಅನೇಕವಾಗಿ ಮೋಸಹೋಗುವೆವು.

ISRT

೧೫೦ ಜೇನುಕೂಡಿಹಾಕುವ ಹುಳದಂತೆ ನಾವುಜಾಗರೂಕರಾಗಿ ಇರಬೇಕೇಹೊರತು, ಸೋಮಾರಿತನವಾಗಿ ಕಾಲಕಳೆಯುವ ಹುಳದಂತೆ ವ್ಯರ್ಥವಾಗಿ ಕಾಲವನ್ನು ಕಳೆಯಬಾರದು.

೧೫೧ ಪ್ರತಿಯೊಂದು ಪದಾರ್ಥಕ್ಕೂ, ಒಂದುಸ್ಥಳವನ್ನು ಕ್ಲುಪ್ತವಾಗಿಟ್ಟುಕೊಂಡು, ಎಲ್ಲಾಪದಾರ್ಥಗಳನ್ನೂ, ಆಯಾಸ್ಥಳಗಳಲ್ಲಿಯೆ ಇಡುವ ವಾಡಿಕೆ ಮಾಡಬೇಕು.

೧೫೨ ಎಂದಿಗೂ ಧೈರ್ಯಕೆಡದಂತೆ, ಭಗವಂತನಲ್ಲಿ ನಂಬಿಕೆಯನ್ನಿಡಬೇಕು.

೧೫೩ ಕ್ಲುಪ್ತವಾದ ಉದ್ದೇಶ್ಯವೂ, ನಿರಾಶೆಯಿಂದ ಎಡಬಿಡದಂಥಾ ಜಾಗರೂಕತೆಯೂ, ನಮ್ಮಎಲ್ಲಾ ಕಾರ್ಯಗಳಲ್ಲಿಯೂ ಸಹಾಯ ಭೂತವಾಗಿ ಬರುವವೆಹೊರತು, ಹಠಾತ್ತಾಗಿ ಸಂಭವಿಸುವಂಥಾದ್ದು ಯಾವದೂಹಾಗೆ ಸಹಾಯಕರವಾದ್ದಾಗಿ ಇರಲಾರದು.

೧೫೪ ವಿಶ್ರಾಂತಿಯನ್ನು ಹೊಂದಲು, ಯಾವಕೆಲಸವನ್ನೂಮಾಡದೆ ವ್ಯರ್ಥಕಾಲಹರಣ ಮಾಡುವುದಕ್ಕಿಂತಲೂ, ಒಂದುಕೆಲಸವನ್ನು ಬಿಟ್ಟು, ಬೇಜಾರುಕಳದುಕೊಳ್ಳುವದಕ್ಕಾಗಿ,ಮತ್ತೊಂದು ಕೆಲಸದಲ್ಲಿ ಆಸಕ್ತರಾಗಬೇಕು.

ISRT

೧೫೫ ಯಾರಿಗಾದರೂ ಒಂದು ಉಪಕಾರವನ್ನು ಮಾಡದ ಕಾಲವನ್ನು, ವ್ಯರ್ಥವಾಗಿ ಕಳದುಹೋದಂತೆ ಭಾವಿಸಬೇಕು.

೧೫೬ ಯಾವಮನುಷ್ಯನು ಅಧಿಕವಾಗಿ ಸಹಿಸಿಕೊಳ್ಳಬಲ್ಲನೋ, ಯಾವನು ಕಷ್ಟಗಳಿಗೆ ಭಯಪಡದೆ ಎದುರಿಗೆನಿಲ್ಲುವನೊ, ಯಾವನು ಹಿಂಜರಿಯುವದಿಲ್ಲವೊ, ಯಾವನು ನಿಧಾನದಿಂದ ಕಾದುಕೊಂಡು ಇರುವನೊ, ಯಾವನು ಎಂದಿಗೂ ಕೆಲಸ ಕಾರ್ಯಗಳಲ್ಲಿಯೇ ಆಸಕ್ತನಾಗಿರುವನೊ ಅಂಥವನೆ ಸಮಸ್ತವನ್ನೂ ಜಯಿಸಬಲ್ಲನು.

೧೫೭ ನಮ್ಮ ಅನೇಕವಾದ ತಾಪತ್ರಯಗಳು, ನಾವಾಗಿಯೆ ಉಂಟುಮಾಡಿಕೊಂಡಂಥವುಗಳೇ ಹೊರತು ವಿಧಿಪ್ರಾಪ್ತವಾದವುಗಳಾಗಿರುವುದಿಲ್ಲ. ಇವುಗಳನ್ನು ಪರಿಹರಿಸಿಕೊಳ್ಳಲು, ಮನೆಯನಾಲ್ಕು ಗೋಡೆಯನ್ನು ಬಿಟ್ಟು, ಕೊಂಚಹೊತ್ತು ಮೈದಾನದಲ್ಲಿ ಸುತ್ತಿಕೊಂಡು ಬರುವದೇ ಉಪಾಯವಾಗಿರುವದು.

೧೫೮ ಜಾಗರೂಕತೆ ಇಂದಲೂ, ವಿವೇಕ ದಿಂದಲೂ ವಿಜ್ಞಾನದಿಂದಲೂ, ಅನೇಕ ಕಾರ್ಯಗನ್ನು ನಾವು ಸಾಧಿಸಬಲ್ಲೆವು.

೧೫೯ ವೈರಾಗ್ಯಭಾವದಿಂದ ಕಾಲವನ್ನು ಕಳದುಕೊಂಡು ನೆಮ್ಮದಿಯಾಗಿರಬೇಕು.

ISRT

೧೬೦ ಸರಿಯಾದ ಸಂದರ್ಭದಲ್ಲಿ ನಾವು ಲಘುವಾಗಿ ಬಿಡಬೇಕು.

೧೬೧ ಆಟಗಳಿಗಿಂತಲೂ ಕಾರ್ಯಗಳೇ ಮೇಲಾಗಿರುವವು.

೧೬೨ ಜೇನುಹುಳದಂತೆ ಜಾಗರೂಕತೆಯಿಂದ ಕೆಲಸಮಾಡುತ್ತಾ, ಹಕ್ಕಿಯಂತೆ ಆನಂದದಿಂದ ಕೂಡಿರಬೇಕು.

೧೬೩ ಪ್ರತಿನಿತ್ಯವೂ, ಮತ್ತು ಪ್ರತಿಕ್ಷಣದಲ್ಲಿಯೂ, ನಮ್ಮ ಬಂಡವಾಳವನ್ನು ನಾವು ಹೆಚ್ಚಿಸುತ್ತಲೇ ಹೋಗಬೇಕು.

೧೬೪ ಎಂದಿಗೂ ಕಾರ್ಯದಲ್ಲಿಯೇ ಪ್ರೀತಿಯನ್ನುಳ್ಳವರಾಗಿರಬೇಕು.

೧೬೫ ನಮ್ಮದೃಷ್ಟಿಗೆ ಬಂದದ್ದರಲ್ಲೆಲ್ಲಾ ನಾವುಸ್ವಾರಸ್ಯಗ್ರಹಣವನ್ನು ಮಾಡುತ್ತಾ ಹೋಗಬೇಕು.

೧೬೬ ಎಷ್ಟು ಅಪಾಯವಾಗಿ ಕಂಡುಬಂದರೂ ನಿಜವನ್ನು ಹೇಳಲು ಹಿಂಜರಿಯಲಾಗದು.

೧೬೭ ಕಾಲುಹೊರಳಿದರೂ, ನಾಲಿಗೆ ಹೊರಳಬಾರದು.

೧೬೮ ವಿಶ್ವಾಸವಾದ ಮಾತುಗಳಿಗೆ ಅನುಸಾರವಾಗಿಯೇ ಇರುವದು ಅದರ ಪ್ರತಿಧ್ವನಿಯು.

೧೬೯ ಎಂಥಾ ಅಲ್ಪ ಜೀವಿಯನ್ನೂ ಅಲಕ್ಷ್ಯಮಾಡಲಾಗದು.

೧೭೦ ಯಂಥಾ ಸಮರ್ಥನಿಗೂ, ಒಂದುಸಮಯದಲ್ಲಿ ಬಹುಸಾಮಾನ್ಯವಾದವನ ಸಹಾಯವೂ ಕೂಡಬೇಕಾಗಿರುವದು.

ISRT

೧೩೧ ಮನೋನಿಗ್ರಹವೇ ಪ್ರಾಪಂಚಿಕ ಸುಖಾನುಭವಕ್ಕೆ ಮುಖ್ಯವಾದ ಕಾರಣವಾಗಿರುವದು.

೧೩೨ ವಿವೇಕೋಪದೇಶಕ್ಕೆ ಸ್ನೇಹಿತರುಗಳಲ್ಲಿಗೂ, ಯಾಚಕಕ್ಕೆ ಅಪರಿಚಯಸ್ಥರಲ್ಲಿಗೂ, ಹೋಗಬೇಕು. ಯಾವಕೆಲಸಕ್ಕೂ ಬಂಧು ಜನಗಳಲ್ಲಿಗೆ ಹೋಗಬಾರದು.

೧೩೩ ನಮ್ಮ ಸ್ವಾತಂತ್ರ್ಯಗಳನ್ನು ನಾವು ಶಾಶ್ವತವಾಗಿರುವಂತೆ ಸಂಪಾದಿಸಿಕೊಳ್ಳಬೇಕೆಂದಿದ್ದರೆ, ಬಹು ನಿಧಾನದಿಂದ ಕೂಡಿದವರಾಗಿಯೂ, ಆಲೋಚನೆ ಪರರಾಗಿಯೂ, ನಮ್ಮ ಕಾರ್ಯವನ್ನು ನಾವು ನಿರೀಕ್ಷಿಸಿ ಕೊಂಡಿರುವಂಥವರಾಗಿಯೂ, ಇರಬೇಕು.

೧೩೪ ಭಯವೇ ದ್ವೇಷಕ್ಕೆ ಮಾತೃಸ್ಥಾನವಾಗಿರುವದು.

೧೩೫ ನಮ್ಮ ಹಾಳು ಪ್ರಕೃತಿ ಸ್ವಭಾವವು ನಮ್ಮ ತತ್ವಜ್ಞಾನಕ್ಕಿಂತಲೂ ಬಲವತ್ತರಾಗಿರುವದು. ಹಾಗಿದ್ದಾಗ್ಯೂ ನಮ್ಮ ತತ್ವಜ್ಞಾನದ ಬಲದಿಂದ ನಮ್ಮ ಕೆಟ್ಟ ಪ್ರಕೃತಿಸ್ವಭಾವವನ್ನು ಅಡಗಿಸಿ ಕೊಳ್ಳಬೇಕು.

೧೩೬ ನಾವು ಕ್ರಮವನ್ನು ಅನುಸರಿಸಿದರೆ ಅದು ನಮಗೆ ಕಾಲವನ್ನು ಉಳಿಸಿ ಕೊಡುವುದು.

೧೩೭ ಈವತ್ತಿನದಿನ ಕಷ್ಟವನ್ನು ಸಹಿಸಿಕೊಂಡವನು ನಾಳೆಯದಿನ ಖ್ಯಾತಿಯನ್ನು ಹೊಂದುವನು.

ISRT

೧೩೮ ಸುಖಾನುಭವಕ್ಕೇನೇ ಭೋಗಿಗಳಾಗಿ ಏರ್ಪಟ್ಟಿ
ರುವಂಥವರುಗಳಿಗೆ ಭಗವಂತನು ಒಂದು ನೈಜ
ವಾಗಿಯೂ, ವಿನೋದವಾಗಿಯೂ ಇರುವಂಥಾ
ಸ್ವಭಾವವನ್ನು ಕೊಟ್ಟಿರುವನು.

೧೩೯ ನಮಗೆ ನಾವು ನಿಜವಾದವರಾಗಿದ್ದರೆ ಮತ್ತ್ಯಾ
ರಿಗೂ ನಾವು ಸುಳ್ಳುಗಾರರಾಗಲಾರೆವು.

೧೪೦ ಮಿತವಾಗಿ ಆಹಾರವನ್ನು ತೆಗೆದುಕೊಂಡು ವೈ
ದ್ಯರನ್ನು ಲಕ್ಷಿಸದೇ ಇರಬೇಕು.

೧೪೧ ಪಥ್ಯವೂ, ನಿಧಾನವೂ, ಆನಂದವೂ, ನಮಗೆ
ಮುಖ್ಯವಾದಂಥಾ ವೈದ್ಯ ಶಿರೋಮಣಿಗಳಾಗಿ
ರುವವು.

೧೪೨ ನಿಧಾನವೇ ಅನೇಕವಾದಂಥಾ ದೀರ್ಘಕಾಲಿಕ
ದುಃಖಗಳನ್ನು ಹೋಗಲಾಡಿಸಬಲ್ಲದು.

೧೪೩ ನಮಗೆ ಪುಸ್ತಕಗಳೂ, ವಸ್ತುವಿಚಾರವೂ,
ಎಷ್ಟು ಕಲಿಸಬಲ್ಲದೋ ಅದಕ್ಕಿಂತಲೂ ಹೆಚ್ಚಾ
ಗಿ ಒಂದುಸಣ್ಣ ಮಗುವು ನಮಗೆ ಪಾಠಕಲಿಸ
ಬಲ್ಲದು.

೧೪೪ ಬರೀಬಾಯಿಮಾತು ಹೆಂಗಸಿನ ಸಮಾನವಾಗಿ
ಯೂ, ಕಾರ್ಯಭಾಗವು ಗಂಡಸಿಗೆ ಸಮಾನವಾ
ಗಿಯೂ, ಇರುವದು.

೧೪೫ ಒಬ್ಬ ಕೊಳೆಯಾದ ಮನುಷ್ಯನು ಪ್ರಾಯಶಃ
ಕೊಳೆಯಾದ ಮನಸ್ಸನ್ನು ಉಂಟಾಗಿರುವನು.

೧೮೬ ಶೀತವಲಯದಲ್ಲಿರಬೇಕಾದ ಮೃಗಗಳಿಗೆ ಭಗವಂತನು ಘಾತ್ರವಾದ ಚರ್ಮವನ್ನೇ ಕೊಡುವನು.

೧೮೭ ಎಂಥಾ ಘನೀಭೂತವಾದಂಥಾ ಮೇಘವೇನಾದಿಯಲ್ಲಿರುವ ಸಂಕಟಗಳಲ್ಲಿಯೂ, ಅದರಹಿಂದುಗಡೆಯಾದ ಒಳಗಿನಭಾಗದಲ್ಲಿ ಸಂತೋಷವೆಂಬ ಬೆಳಕಿನಿಂದ ಪ್ರಕಾಶವಾಗಿಯೇ ಇರುವುದು.

೧೮೮ ಸಮಸ್ತರನ್ನೂ ನಮ್ಮಶಕ್ತ್ಯನುಸಾರವಾಗಿ ಸಂತೋಷ ಪಡಿಸಬೇಕೆಂಬುವುದೇ ನಮ್ಮ ಸಂತೋಷದ ಪಾರವಾಗಿರಬೇಕು.

೧೮೯ ಸಮಯವನ್ನು ನಿರೀಕ್ಷಿಸಿಕೊಂಡಿರುವವನಿಗೇನೇ ಯೆಲ್ಲವೂ ಕೂಡಿಬರುವದು.

೧೯೦ ವಿವಾಹದಲ್ಲಿ ಮುಖ್ಯವಾಗಿ ಅನುರೂಪ ದಾಂಪತ್ಯಕ್ಕೇನೇ ಗಮನ ಕೊಡಬೇಕು.

೧೯೧ ನಾವು ಯೇನುಮಾಡತಕ್ಕದ್ದೆಂಬುವದಕ್ಕೆ ಗಮನ ಕೊಡುವದಕ್ಕಿಂತಲೂ ನಾವು ಹ್ಯಾಗೆ ಇರತಕ್ಕದ್ದೆಂಬುವದಕ್ಕೆ ಗಮನ ಕೊಡಬೇಕು.

೧೯೨ ದುಃಖವು ಅಡಗಿರುವಾಗ ಅದನ್ನು ಎಬ್ಬಿಸಬಾರದು.

೧೯೩ ಬರೀವಂದು ಹುಚ್ಚುಸಾಹಸದಿಂದ ಯಾರೂವಂದು ದೊಡ್ಡಸ್ತಿಕೆಗೆ ಬರಲಾರರು.

೧೯೪ ಕೇವಲ ದ್ರವ್ಯಸಂಪಾದನೆಗಾಗಿ ನಮ್ಮ ಪ್ರತಿಜ್ಞೆಗಳನ್ನು ನಾವು ಭಂಗಮಾಡಿಕೊಳ್ಳಬಾರದು.

ISRT

೧೯೫ ಸುಗುಣಗಳನ್ನೇ ಬೀಜವಾಗಿ ಉಳ್ಳಂಥಾ ವೃಕ್ಷದ ಅಭಿವೃದ್ಧಿಗೆ ವಿಪದ್ದೆಶೆ ಎಂಬುವದೇ ಸುಕ್ಷೇತ್ರವಾಗಿರುವದು.

೧೯೬ ವಿಷಯ ಸಾಮೀಪ್ಯವು ಲಾಭವಕ್ಕೆ ಕಾರಣವಾಗುವದು.

೧೯೭ ಸುಲಭವಾಗಿ ಸಿಕ್ಕುವಂಥಾದ್ದೆಲ್ಲಾ ಲಕ್ಷಕ್ಕೆ ಬಾರದೇ ಹೋಗುವದು.

೧೯೮ ಕಷ್ಟಗಳನ್ನು ಜಯಿಸಿದಷ್ಟು ನಮ್ಮ ಸಂತೋಷ ವೃದ್ಧಿಯನ್ನು ಹೊಂದುವದು.

೧೯೯ ಒಂದು ವಿಷಯವನ್ನು ತೀರ್ಮಾನ ಮಾಡುವಾಗ ನಾವು ನಮ್ಮ ಬುದ್ಧಿಯನ್ನೂ, ದಯಾರಸವನ್ನೂ, ಉಪಯೋಗಿಸಬೇಕು.

೨೦೦ ವಿರಾಮವನ್ನು ಕಾಲವೆಂಬುವ ಭಂಗಾರದ ಪುಡಿಯೆಂದು ತಿಳಿಯಬೇಕು.

೨೦೧ ಜಾಗರೂಕತೆಯಿಂದ ಜಯಿಸಕೂಡದಂಥಾದ್ದು ಯಾವದೂ ಇಲ್ಲ.

೨೦೨ ನಿಜವಾದ ವಿವೇಕವನ್ನು ಉಪದೇಶಿಸುವಂಥಾ ಪಾಠಶಾಲೆಯು ಆಶಾಭಂಗವೆಂಬ ಹೆಸರನ್ನುಳ್ಳದ್ದಾಗಿರುವದು.

೨೦೩ ನಿನ್ನ ಅದೃಷ್ಟದಮೇಲೆ ಭಾರಹಾಕಿ ಕೂಡುವದಕ್ಕಿಂತಲೂ, ನಿನ್ನ ನಡತೆಯಮೇಲೆ ಭಾರಹಾಕಿ ಕೂಡುವದು ಉತ್ತಮವಾಗಿರುವದು.

ISRT

೨೦೪. ಶುದ್ಧ ನೀರು ಕುಡಿಯಲು ಯೋಗ್ಯ, ಸತ್ಯವಾತೇ ಆಡಲು ಯೋಗ್ಯ.

೨೦೫. ಅಜೀರ್ಣಕ್ಕೆ ಉಪವಾಸ, ಅಹಂಕಾರಕ್ಕೆ ಪರಿಹಾಸ.

೨೦೬. ಜಾತಿಕೀಳಾದರು ಚಾಲುಮೇಲಾಗಿರಬೇಕು.

೨೦೭. ಒಪ್ಪವಿಲ್ಲದವನೆ ತಿಪ್ಪೆಗಿಂತಲೂ ಕಡೆ.

೨೦೮. ಸೋಮಾರಿತನವು ಆಡುವುದರಲ್ಲಿ ಜೇಡಹುಳಗಳ ನೂಲಿನಂತೆ ಕೋಪನಡಿಶಿಕೊಂಡು, ನಂತರ ಪ್ರಾಯಶಃ ಕಬ್ಬಿಣದ ಸರಪಣಿಯಂತೆ ಬೋಡಿಯಾ ಪರಿಣಮಿಸುವದು.

೨೦೯. ನಿಜವಾದ ವಿವೇಕವನ್ನು ಉಪದೇಶಿಸುವಂಥಾ ಪಾಠಶಾಲೆಯು ಆಶಾಭಂಗವೆಂಬ ಹೆಸರುಳ್ಳದ್ದಾಗಿರುವದು.

೨೧೦ (ಒಳ್ಳೇಪದಾರ್ಥವು ಯಾರಿಗಾದರೂ ದೃಷ್ಟಿಗೆ ಬಿದ್ದೇಬೀಳುವದು) ಗೋಡೆಗೆ ಉಪಯೋಗಪಡತಕ್ಕ ಕಲ್ಲನ್ನ ದಾರಿಯಲ್ಲಿ ಬಿಟ್ಟುಬಿಡುವದಿಲ್ಲ.

೨೧೧ ಯಾವಮನುಷ್ಯನು ಬಹುಗಾಂಭೀರ್ಯ ಸ್ವಭಾವದಿಂದ ಜೀವಿಸುವನೋ ಅಂಥವನೇ ನಿಜವಾದ ಗಾಂಭೀರ್ಯವನುಳ್ಳವನು.

೨೧೨ ಅದೃಷ್ಟವನ್ನು ನಂಬಿಕೊಂಡು ಕೂಡದೆ, ನಿನ್ನ ನಡತೆಯಲ್ಲಿ ನಿನ್ನ ಭರವಸೆಯನ್ನಿಟ್ಟು ಕೊಳ್ಳತಕ್ಕದ್ದು.

ISRT

೨೧೩ ಅವಿವೇಕಿಗಳ ಪರಿಹಾಸ್ಯವನ್ನು ತುಚ್ಛವಾಗಿ ಎಣಿಸಿ, ಅದನ್ನು ಲಕ್ಷಮಾಡದೇ ಇರಬೇಕು.

೨೧೪ ಕೆಟ್ಟಪಾಠವು ನಿಮಿಷದಲ್ಲಿ ಕಲಿಯಲ್ಪಡುವದು.

೨೧೫ ನೀನು ಋಜುವಾದ ಮಾರ್ಗದಲ್ಲಿದ್ದರೆ, ನಿನಗೇನು ವಿಪತ್ತು ಸಂಭವಿಸಲಾರದು.

೨೧೬ ಯಾವಮನುಷ್ಯನಿಗೂ, ಅವನ ಹೆಂಡತಿಯೇ ಸೌಭಾಗ್ಯವಾಗಿಯೇ ಆಗಲಿ, ದೌರ್ಭಾಗ್ಯವಾಗಿಯೇ ಆಗಲಿ ಆಗುವಳು.

೨೧೭ ಮನುಷ್ಯನಿಗೆ ಶ್ಲಾಘ್ಯವಾದ ಭಾಗ್ಯವು ಒಂದು ಒಳ್ಳೇ ಹೆಂಡತಿಯಾಗಿಯೂ, ದೇಹಾರೋಗ್ಯವಾಗಿಯೂ, ಇರುವದು.

೨೧೮ ತೆರದಬಾಗಿಲು ಮಹರ್ಷಿಯನ್ನುಕೂಡ ಚಪಲಗೊಳಿಸುವದು.

೨೧೯ ಹೆಂಗಸಿನಮನಸ್ಸೂ, ಛಳಿಕಾಲದ ಹೊಳೆಯೂ, ಒಂದು ನಿಧಾನದಲ್ಲಿ ಇರುವದೇಯಿಲ್ಲ.

೨೨೦ ಮುಂದಾಗಿ ಎಚ್ಚರಿಸುವ ಒಂದುಮಾತು ಅನಂತರ ಉಪದೇಶಿಸುವ ಇಪ್ಪತ್ತು ಮಾತಿಗೆ ಸಮವಾಗಿರುವದು.

೨೨೧ ತಲೆಯನ್ನು ಲಕ್ಷ್ಯವಿಲ್ಲದೆ ಮೇಲಕ್ಕೆ ಎತ್ತಿಕೊಂಡು ಹೋಗಿ ಘಾಯ ಮಾಡಿಕೊಂಡು ಬರುವದಕ್ಕಿಂತಲೂ, ತಲೆಯನ್ನು ಬೊಗ್ಗಿಸಿಕೊಂಡು ಹೋಗುವದು ಬಹಳ ಉತ್ತಮವಾದದ್ದು.

ISRT

೨೨೧ ಯಾವಾಗಲೂ ಭಯಪಟ್ಟುಕೊಂಡು ಸಾಯುತ್ತಲಿರುವುದಕ್ಕಿಂತಲೂ, ಅಭಯವನ್ನು ಒಂದುಸಲ ಯೆದುರು ಹಾಕಿಕೊಂಡುಬಿಡುವದು ಸರ್ವೋತ್ತಮವಾದ ಕೆಲಸವಾಗಿರುವದು.

೨೨೨ ಜಯವನ್ನು ಹೊಂದಬೇಕಾದರೆ ನಿಧಾನವು ಅವಶ್ಯಕವಾಗಿರುವದು.

೨೨೩ ನಿನ್ನನ್ನು ತಳ್ಳಿಹಾಕುವಂಥಾ ಕುದುರೆಯ ಮೇಲೆ ಸವಾರಿ ಮಾಡುವದಕ್ಕಿಂತಲೂ, ನಿನ್ನನ್ನು ಎತ್ತಿಕೊಂಡು ಹೋಗುವಂಥಾ ಕತ್ತೆಯ ಮೇಲೆ ಸವಾರಿಮಾಡುವದು ಉತ್ತಮ.

೨೨೪ ಎಲ್ಲವೂ ಪೂರೈಸಿಹೋದನಂತರ ಕೈಯನ್ನು ಹಿಡಿಯುವದಕ್ಕಿಂತಲೂ, ತುಂಬಿರುವಾಗಲೇ ಕೈಹಿಡಿಯುವದು ವಳ್ಳೇದು. ಸೌಖ್ಯವು ಹೆಚ್ಚಾಗಿಬೇಕಾದರೆ ಅವರ ವಯಸ್ಸಿನಲ್ಲಿ ಖರ್ಚುಮಾಡದೆ ಹಿಡಿಯುವದಕ್ಕಿಂತಲೂ, ಬಾಲ್ಯದಲ್ಲಿಯೇ ಮಿತವಾಗಿ ಖರ್ಚು ಮಾಡುತ್ತಾ ಬರುವದು ಮೇಲಾದದ್ದು.

೨೨೫ ಚಿಕ್ಕವಯಸ್ಸಿನಲ್ಲಿ ಕೈಹಿಡದು ವಾರ್ಧಕ್ಯದಲ್ಲಿ ಅದನ್ನು ಧಾರಾಳವಾಗಿ ಬಿಡಬೇಕು.

೨೨೬ ಯೆಲ್ಲಾ ಖರ್ಚುಮಾಡಿಬಿಟ್ಟು ಕಳಕೊಂಡ ನಂತರ ಮಿಗಲಿಸಿಕೊಳ್ಳುವ ಪ್ರಯತ್ನವು ವ್ಯರ್ಥವಾದದ್ದು.

ISRT

೨೮೮ ವಂದು ವುದ್ದೇಶ್ಯವನ್ನು ಪಟ್ಟಾಗಿಹಿಡಿಯದವನು ಕೆಳವಳ ಪಡುವನು. 'ಯಿತೋಭ್ರಷ್ಟಃ ತತೋಭ್ರಷ್ಟಃ' ಎಂಬಂತೆ ಯಾವದನ್ನಾ ಸಾಧಿಸದೇ ಭಂಗಪಡುವನು. ಎರಡುಮೊಲಗಳನ್ನು ಅಟ್ಟಿಸಿಕೊಂಡು ಹೋದರೆ ನೀನು ಯಾವುದನ್ನಾ ಹಿಡಿಯಲಾರೆ.

೨೮೯ ಅದೃಷ್ಟವು ಬದಲಾಯಿಸುತ್ತಿರುವದೇ ಜನ್ಮಕ್ಕೆ ಸ್ವಭಾವ ಸಿದ್ಧವಾಗಿರುವದು.

೨೯೦ ತನ್ನ ಗೃಹಕೃತ್ಯವನ್ನು ನೋಡಿಕೊಳ್ಳದವನು ಶಾಸ್ತ್ರವನ್ನು ನಂಬದೇ ಇರುವವನಿಗಿಂತಲೂ ಕೇಡಾದವನು.

೨೯೧ ಬಾಲ್ಯದಲ್ಲಿ ಮಕ್ಕಳು ತಾಯಿಯನ್ನು ಹಾಲಿಗಾಗಿ ಗುಂಜುವರು. ಯವ್ವನ ಬಂದಹಾಗೆಲ್ಲಾ ತಂದೆಯನ್ನು ಹಣಕ್ಕಾಗಿ ಗುಂಜುವರು.

೨೯೨ ವಂದೊಂದು ಕಲ್ಲನ್ನು ಕೆಡವುತ್ತ ಪರ್ವತವನ್ನು ಕೂಡ ಮೈದಾನದಂತೆ ಮಾಡಿಬಿಡಬಹುದು.

೨೯೩ ವೈದ್ಯರು ವ್ಯಾಧಿಯನ್ನು ವಾಸಿಮಾಡುವುದಕ್ಕಿಂತಲೂ, ಪಥ್ಯವು ವಿಶೇಷವಾಗಿ ಕಾರ್ಯಕಾರಿಯಾಗುವುದು.

೨೯೪ ಯೇಕಾಂತದಲ್ಲಿಯೂ ಕೂಡ ಲೋಕಾಂತದಲ್ಲಿ ನಡಿಯುವಂತೆಯೇ ಆ ಕಾರ್ಯಗಳನ್ನು ನಡಿಸಬೇಕು.

ISRT

೨೩೫ ಭಾವಿಯಿಂದ ನೀರುಶೇದುತ್ತಲೇ ಯಿದ್ದರೆ ಅದು ಯೆಂದಿಗೂವಣಗಿ ಹೋಗುವದಿಲ್ಲ.

೨೩೬ ಕೃಷಿಷ ಮಾಡತಕ್ಕಕಡೆ ಖರ್ಚುಮಾಡಬಾರದು. ಖರ್ಚು ಮಾಡತಕ್ಕಕಡೆ ಕೃಶೀಷ್ ಮಾಡಬಾರದು.

೨೩೭ ಯೆಲ್ಲಾ ಕಾಳನಲ್ಲಿಯೂ ಹೊಟ್ಟಿರುತ್ತೆ ಅದರಂತೆಯೇ ಯಲ್ಲರಲ್ಲಿಯೂ ತಪ್ಪಿತವುಃ ಇದೆ.

೨೩೮ ಯಲ್ಲರೂ ಮಾಡತಕ್ಕ ಕೆಲಸವನ್ನು ಮಬ್ಬರು ಮಾಡದೆ ಬಿಡುವರು.

೨೩೯ ಪ್ರತಿ ಮಬ್ಬನಿಗೂ ಅವನ ಸಮಯ ವುಂಟು.

೨೪೦ ಅವಿವೇಕಿಗಳು ತಪ್ಪುಗಳನ್ನು ಮಾಡುತ್ತಾ ಭಗವಂತನನ್ನು ದೂಸಿಸುವರು.

೨೪೧ ಎಂಥಾಬೀಗವೂ ಭಂಗಾರದ ಬೀಗದ ಕೈಯಿಂದ ತೆಗಿಯಲ್ಪಡುವದು.

೨೪೨ ಬುದ್ಧಿವಂತರು ಯಿತರರ ತಪ್ಪಿತವನ್ನು ನೋಡಿ ತಾವು ತಿದ್ದಿಕೊಳ್ಳುವರು. ಆದರೆ ಅವಿವೇಕಿಗಳು ಅವರ ಸ್ವಂತ ತಪ್ಪಿತಗಳಿಂದಲ್ಲದೆ ಅವರು ತಿದ್ದಿಕೊಳ್ಳರು.

೨೪೩ ಜಯವನ್ನು ಹೊಂದಲು ಧೈರ್ಯವು ಅವಶ್ಯಕವಾಗಿರುವದು.

೨೪೪ ಕಾರ್ಯವಲ್ಲದ, ಬರೀವಳ್ಳೀಯುಮಾತು ಕೆಲಸಕ್ಕೆ ಬಾರದ ಪಾಚಿಗೆ ಸಮಾನವಾಗಿರುವದು.

ISRT

೨೪೫ ಆತುರ ಪಟ್ಟಷ್ಟು ಸಾವಕಾಶವಾಗುವದು.

೨೪೬ ಸ್ನೇಹಿತರುಗಳಂತೆ ಕಾಣಿಸಿಕೊಳ್ಳುವರು ಶತ್ರುಗಳಿಗಿಂತಲೂ ಕೇಡಾದವರು.

೨೪೭ ಪ್ರೀತಿ ಯಿಲ್ಲದಕಡೆ ಯಲ್ಲವೂ ತಪ್ಪಾಗಿಯೇ ಇರುವದು.

೨೪೮ ಒಳ್ಳೇಮಾತಿಗೆ ನಾವು ಬೆಲೆಕೊಡಬೇಕಾದ್ದಿಲ್ಲ. ಆದಾಗ್ಯೂ ಅದು ಯೆಂದಿಗೂ ಅನರ್ಥವಾದ್ದಾಗಿಯೇ ಇರುವದು.

೨೪೯ ಮದುವೆ ಯಾಗುವದಕ್ಕೆ ಮುಂಚೆ ಚನ್ನಾಗಿಕಣ್ಣು ತೆರದುನೋಡಿ, ನಂತರಅದನ್ನು ಕೊಂಚ ಮಟ್ಟಿಗೆ ಮುಚ್ಚಿಕೊಂಡಿರಬೇಕು.

೨೫೦ ಯಾರು ಪರೋಪಕಾರಕ್ಕಲ್ಲದೇ ತಮಗಾಗಿಯೇ ಬಾಳುವರೋ ಅಂಥವರ ಬಾಳು ವ್ಯರ್ಥವಾದದ್ದು.

೨೫೧ ತಗ್ಗಿದ ಬಾಗಲಿಟ್ಟಿರುವವನು ತಗ್ಗಿಯೇಹೋಗಬೇಕು.

೨೫೨ ಜೇಬಿನಲ್ಲಿ ಒಳ್ಳೇನಾಣ್ಯವಿಲ್ಲದವನು, ತನ್ನನಾಲಿಗೆಯಲ್ಲಾದರೂ, ಒಳ್ಳೇ ನಾಣ್ಯವೆಂಬುವನು ವಚನವನ್ನು ಹೊಂದಿರಬೇಕು.

೨೫೩ ಸಾಲಕೊಡುವನು ಹಣವನ್ನುಮಾತ್ರ ಕಳದುಕೊಳ್ಳುವ ಸ್ನೇಹಿತನನ್ನೂ ಕಳದುಕೊಳ್ಳುವನು.

ISRT

೨೪೪ ವಿನಯವು ಸಮಸ್ತ ಸುಗುಣಗಳಿಗೂ ತಳಪಾದಿ ಯಂತಿರುವದು.

೨೪೫ ನಮ್ಮನ್ನ ನಾವು ಜಯಿಸಿಕೊಳ್ಳುವದನ್ನ ಸಾ ನ್ಯವಾದದ್ದೆಂದು ಊಹಿಸಲಾಗದು.

೨೪೬ ಸಕಾಲದಲ್ಲಿ ದುಷ್ಕಾಲಕ್ಕೆ ಸಿದ್ಧಪಡಿಸಿಕೊಳ್ಳ ಬೇಕು.

೨೪೭ ಕೋಪಾಕ್ರಾಂತನಾದ ಮನುಷ್ಯನು ಆ ಕೋಪ ವೆಂಬುವ ಬೆದರು ಕುದುರೆಯಿಂದ ಸ್ವೇಚ್ಛೆಯಾ ಗಿ ಕೆಳೆಯಲ್ಪಡುವನು.

೨೪೮ ಒಳ್ಳೇಕುದುರೆಯು ಯೆಂದಿಗ್ಗೂ ಯೆಡರುವದಿ ಲ್ಲ. ಒಳ್ಳೇ ಭಾರ್ಯೆಯು ಯೆಂದಿಗೂ ಗೊಣ ಗುವದಿಲ್ಲ.

೨೪೯ ಬಿಸಲುಕಾಯುವಾಗ ನಾವು ಕಾರ್ಯದಲ್ಲಿ ಆಸ ಕ್ತರಾಗದ ಪಕ್ಷದಲ್ಲಿ ಮಳೆಗೆರೆಯುವಾಗ ನಾವು ಆಹಾರವಿಲ್ಲದೇ ವರಗಬೇಕಾಗುವದು.

೨೫೦ ಇನ್ನೊಬ್ಬನಿಗೆ ನಾವು ಕೆಟ್ಟದ್ದು ಮಾಡಲು ಉದ್ಯುಕ್ತರಾದರೆ ಅದು ನಮಿಗೇನೇ ಲತ್ತೆ ಹೊಡಿಯುವದು.

೨೫೧ ನಮ್ಮ ನಡತೆಯನ್ನು ನಾವು ತಿದ್ದಿಕೊಂಡರೆ ಅದು ನಮ್ಮ ಅದೃಷ್ಟವನ್ನು ಕುದುರುಪಾಟು ಮಾಡುವದು.

ISRT

೨೬೦ ಕಳ್ಳರು ಕದಿಯುವದಕ್ಕಿಂತಲೂ ನಮ್ಮ ಜಿಹ್ವಾ ಚಾಪಲ್ಯವು ಅಧಿಕ ನಷ್ಟವನ್ನುಂಟು ಮಾಡು ವುದು.

೨೬೩ ಘಾಯಗಳಿರುವ ಕಾಲಿನಮೇಲೆ ಯೆಂದಿಗೂ ತುಳಿಯಬಾರದು.

೨೬೪ ‘ಇಲ್ಲ’ ‘ಹೌದು’ ಯೆಂಬುವ ವಾಕ್ಯಗಳು ದೀರ್ಘ ವಾದ ಚರ್ಚೆಗೂ, ದ್ವೇಷಕ್ಕೂ ಕಾರಣವಾಗು ವುವು.

೨೬೫ ಮೊದಲು ಯೋಗ್ಯತೆಯನ್ನು ಸಂಪಾದಿಸಿ, ನಂ ತರ ಯಾವುದನ್ನಾದರೂ ಅಪೇಕ್ಷಿಸು.

೨೬೬ ಅತ್ಯಲ್ಪವಾದ ವಿಷಯವು ಕೂಡ ವಿಪರೀತವಾದ ವ್ಯಾಜ್ಯಕ್ಕೆ ಅವಕಾಶವನ್ನು ಕೆಡುವುದು.

೨೬೭ ಕ್ರಮವೇ ಬುವವೃಕ್ಷದ ಬೇರು ಖೈಯಾಗಿದ್ದರೂ ಅದರ ಫಲವು ಸ್ವಾದುವಾಗಿಯೇ ಇರುವದು.

೨೬೮ ಕಣ್ಣು ಶುದ್ಧವಾಗಿ ಕುರುಡಾಗಿ ಹೋಗುವುದ ಕ್ಕಿಂತಲೂ, ದೃಷ್ಟಿ ಕೊಂಚವಕ್ರವಾದರೂ ಬಾಧಕವಿಲ್ಲವಷ್ಟೆ.

ADYAR LIBRARY

ISRT